Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 85/2018

ಫ್ರಾ.ಸಾ. 2 ಚಾ.ಸಾ. 3

| | | |
|---|---|---|
| ಹೆಸರು | : | ಶಶಿಧರ |
| ತಂದೆಯ ಹೆಸರು | : | ಶಿವರಾಜ ಮಡ್ಡಿ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಸರಕಾರಿ ಶಾಲಾ ಶಿಕ್ಷಕರು |
| ವಾಸ | : | ಹುಮನಾಬಾದ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 09-06-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 2002 ರಿಂದ ಡಿಸೆಂಬರ್ 2024 ರ ವರೆಗೆ ಬಂದಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನಗೆ ಚಾಸಾ-1, 2, 4 ರಿಂದ 7 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ದಿ: 08.01.2018 ರಂದು ನಾನು ಶಾಲೆಯಲ್ಲಿ ಕರ್ತವ್ಯದಲ್ಲಿದ್ದಾಗ ಗ್ರಾಮೀಣ ಠಾಣೆಯ ಪೊಲೀಸರು ನಮ್ಮ ಶಾಲೆಗೆ ಬೆಳಿಗ್ಗೆ 11-30 ಗಂಟೆಗೆ ಬಂದಿದ್ದು ಗಾಂಜಾ ಪ್ರಕರಣವಿದ್ದು ನನ್ನನ್ನು ಮತ್ತು ಚಾಸಾ-2 ನನ್ನ ಸಹೊದ್ಯೊಗಿಯನ್ನು ಸಾಕ್ಷಿದಾರರಾಗಲು ಕರೆದಿರುತ್ತಾರೆ. ಆಗ ನನ್ನ ಜೊತೆ ಚಾಸಾ-7 ಸಹ ಇದ್ದರು. ನಮ್ಮನ್ನು ಪೊಲೀಸರು ಹೊಸಳ್ಳಿ ಸೀಮಾಂತರದ ಆರೋಪಿತರ ಹೊಲಕ್ಕೆ ಕರೆದುಕೊಂಡು ಹೋಗಿದ್ದು ರಸ್ತೆಯಲ್ಲಿ ಜೀಪು ನಿಲ್ಲಿಸಿ ಹೊಲದಲ್ಲಿ ನಡೆದುಕೊಂಡು ಹೋಗಿ ಎರಡು ಹೊಲಗಳ ನಂತರ ಉಳ್ಳಾಗಡ್ಡಿ ಉಳುಮೆ ಮಾಡಿದ್ದು ಸದರಿ ಹೊಲದಲ್ಲಿ ಗಾಂಜಾ ಬೆಳೆದಿದ್ದರು. ಅದನ್ನು ಪರಿಶೀಲಿಸಿದಾಗ ಸುಮಾರು 3 ಕೆ.ಜಿ. ಗಾಂಜಾ ಇತ್ತು. ಅದನ್ನು ಪೊಲೀಸರು ನಮ್ಮ ಸಮಕ್ಷಮದಲ್ಲಿ ಅರಗಿನ ಸೀಲು ಹಾಕಿ ಜಪ್ತಿಪಡಿಸಿಕೊಂಡು 200 ಗ್ರಾಮ್ ನಷ್ಟು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದುಕೊಂಡರು. ನಾವು ಆರೋಪಿತರ ಹೊಲಕ್ಕೆ

ಹೋಗುವಾಗ ನಮ್ಮನ್ನು ನೋಡಿ ಆರೋಪಿ ಸ್ಥಳದಿಂದ ಓಡಿ ಹೋಗಿರುತ್ತಾರೆ. ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30 ಗಂಟೆಯ ವರೆಗೆ ಜರುಗಿಸಿರುತ್ತಾರೆ. ಸದರಿ ಆರೋಪಿ ನ್ಯಾಯಾಲಯದ ಮುಂದೆ ಇರುತ್ತಾನೆ. ಸಾಕ್ಷಿಗೆ ನಿ.ಪಿ.1 ಜಪ್ತಿ ಪಂಚನಾಮೆಯನ್ನು ತೊರಿಸಿ ಸಹಿ ಗುರುತಿಸಿದ್ದು ಅದನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಮು.ಮಾ.1ನ್ನು ಸಾಕ್ಷಿಗೆ ತೋರಿಸಿ ತನ್ನ ಸಹಿ ಗುರುತಿಸಿದ್ದು ಅದನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ವಿ.ಆರ್.ಎಸ್. ವಕೀಲರಿಂದ</u>

3. ನನಗೆ ಈ ಪ್ರಕರಣದಲ್ಲಿ ಪಂಚನಾಮೆಗೆ ಪೊಲೀಸರು ತಿಳುವಳಿಕೆ ನೀಡಿರುತ್ತಾರೆ. ಪೊಲೀಸರು ನನಗೆ ತಿಳಿವಳಿಕೆ ನೀಡಿದ ನಂತರ ನಾನು ಅವರಿಗೆ ಸ್ವೀಕೃತಿ ನೀಡಿಲ್ಲ. ಬಂದಳ್ಳಿ ಗ್ರಾಮದಿಂದ ಹೊಸಳ್ಳಿ ಗ್ರಾಮಕ್ಕೆ ಸುಮಾರು 15-20 ಕಿ.ಮೀ. ಅಂತರ ಇದೆ ಎಂದರೆ ಸರಿ. ನಿ.ಪಿ.1ರ ಸಮಯದಲ್ಲಿ ನಾನು ಪೊಲೀಸ ಜೀಪನಲ್ಲಿ ಹೋಗಿರುತ್ತೇನೆ. ಸದರಿ ಜೀಪ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ನಾವು 6 ಜನ ಪೊಲೀಸ ಜೀಪನಲ್ಲಿ ಸ್ಥಳಕ್ಕೆ ಹೋಗಿರುತ್ತೇವೆ. ಚಾಲಕ ಯಾರು ಎಂದು ಗೊತ್ತಿಲ್ಲ. ಆರೋಪಿತರ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಪೊಲೀಸರು ಯಾವುದೇ ಕಂದಾಯ ಅಧಿಕಾರಿಯನ್ನು ಸ್ಥಳಕ್ಕೆ ಕರೆದಿರಲಿಲ್ಲ. ಗಾಂಜಾ ಗಿಡಗಳ ಜೊತೆ ಅವುಗಳ ಬೇರು, ಖಾಂಡ ಮತ್ತು ಎಲೆ ಜೊತೆಯಲ್ಲಿಯೇ ಇತ್ತು. ಜಪ್ತಿ ಪಡಿಸಿಕೊಂಡ ಗಾಂಜಾ ಗಿಡಗಳ ತಳಿ ಗೊತ್ತಿಲ್ಲ. ಆರೋಪಿ ನಾವು ಸ್ಥಳಕ್ಕೆ ಹೋದಾಗ ಸುಮಾರು 100 ಮೀಟರ ದೂರದಲ್ಲಿ ಓಡಿ ಹೋಗುತ್ತಿದ್ದರು. ನಿ.ಪಿ.1ನ್ನು ತಯಾರಿಸಿದ ಚೆಕ್ಕು ಬಂದಿ ಹೇಳಲು ಬರುವುದಿಲ್ಲ.

4. ಯಾವುದೇ ದಾಖಲೆಯಲ್ಲಿ ತಿದ್ದುಪಡಿ ಮಾಡಿದರೆ ಚೆಕ್ಕ ರುಜು ಮಾಡುತ್ತೇವೆ ಎಂದರೆ ಸರಿ. ನಿ.ಪಿ.1ರಲ್ಲಿ ಮಾಡಲಾದ ಎರಡು ತಿದ್ದುಪಡಿಗಳಿಗೆ ಚೆಕ್ಕ ರುಜು ಇಲ್ಲ ಎಂದರೆ ಸರಿ. ಸರಕಾರಿ ನೌಕರರು ನಿರ್ವಹಿಸಿದ ಕೆಲಸಕ್ಕೆ ಸಂಬಂಧಿಸಿದಂತೆ ದಿನಚರಿ ಬರೆಯುತ್ತಾರೆ ಎಂದರೆ ಸರಿ. ನಮ್ಮ ನೌಕರಿಯಲ್ಲಿ ವ್ಯಾಸಂಗ ವೇಳಾ ಪಟ್ಟಿ ಇರುವದರಿಂದ ದಿನಚರಿ ಬರೆಯುದಿಲ್ಲ. ದಿಃ 08.01.2018 ರ ದಿನದ ಚಲನ ವಲನ ನೊಂದಣಿ ಪುಸ್ತಕನ ಪ್ರತಿಯನ್ನು ತನಿಖಾಧಿಕಾರಿಗಳಿಗೆ ನೀಡಿಲ್ಲ.

5. ದಿಃ 08.01.2018 ರಂದು ನಾನು ಶಾಲೆಯಲ್ಲಿ ಕರ್ತವ್ಯದಲ್ಲಿದ್ದಾಗ ಗ್ರಾಮೀಣ ಠಾಣೆಯ ಪೊಲೀಸರು ನಮ್ಮ ಶಾಲೆಗೆ ಬೆಳಿಗ್ಗೆ 11-30 ಗಂಟೆಗೆ ಬಂದಿದ್ದು ಗಾಂಜಾ ಪ್ರಕರಣವಿದ್ದು ನನ್ನನ್ನು ಮತ್ತು ಚಾಸಾ-2 ನನ್ನ ಸಹೋದ್ಯೋಗಿಯನ್ನು ಸಾಕ್ಷಿದಾರರಾಗಲು ಕರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನನ್ನ ಜೊತೆ ಚಾಸಾ-7 ಸಹ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮನ್ನು ಪೊಲೀಸರು ಹೊಸಳ್ಳಿ ಸೀಮಾಂತರದ

ಆರೋಪಿತರ ಹೊಲಕ್ಕೆ ಕರೆದುಕೊಂಡು ಹೋಗಿದ್ದು ರಸ್ತೆಯಲ್ಲಿ ಜೀಪು ನಿಲ್ಲಿಸಿ ಹೊಲದಲ್ಲಿ ನಡೆದುಕೊಂಡು ಹೋಗಿ ಎರಡು ಹೊಲಗಳ ನಂತರ ಉಳ್ಳಾಗಡ್ಡಿ ಉಳುಮೆ ಮಾಡಿದ್ದು ಸದರಿ ಹೊಲದಲ್ಲಿ ಗಾಂಜಾ ಬೆಳೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಪರಿಶೀಲಿಸಿದಾಗ ಸುಮಾರು 3 ಕೆ.ಜಿ. ಗಾಂಜಾ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಪೊಲೀಸರು ನಮ್ಮ ಸಮಕ್ಷಮದಲ್ಲಿ ಅರಗಿನ ಸೀಲು ಹಾಕಿ ಜಪ್ತಿಪಡಿಸಿಕೊಂಡು 200 ಗ್ರಾಮ್ ನಷ್ಟು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆರೋಪಿತರ ಹೊಲಕ್ಕೆ ಹೋಗುವಾಗ ನಮ್ಮನ್ನು ನೋಡಿ ಆರೋಪಿ ಸ್ಥಳದಿಂದ ಓಡಿ ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30 ಗಂಟೆಯ ವರೆಗೆ ಜರುಗಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆಗೆ ಹೋಗದಿದ್ದರೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 85/2018

ಫ್ರಾ.ಸಾ. 3 ಚಾ.ಸಾ. 4

| | | |
|---|---|---|
| ಹೆಸರು | : | ಅಬ್ದುಲ ಬಾಷಾ |
| ತಂದೆಯ ಹೆಸರು | : | ಲಾಲ ಅಹ್ಮದ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಪೊಲೀಸ ಪೇದೆ ವಡಗೇರಾ ಪೊಲೀಸಠಾಣೆ |
| ವಾಸ | : | ವಡಗೇರಾ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 09-06-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 2015 ರಿಂದ 2020 ವರೆಗೆ ನಾನು ಗ್ರಾಮೀಣ ಠಾಣೆ ಯಾದಗಿರಿಯಲ್ಲಿ ಪೊಲೀಸ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನಗೆ ಚಾಸಾ-1 ರಿಂದ 3, 5 ರಿಂದ 7 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ದಿಃ 08.01.2018 ರಂದು ಬೆಳಿಗ್ಗೆ 11-00 ಗಂಟೆಗೆ ನಾನು ಮತ್ತು ಚಾಸಾ-5 ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರಿಗೆ ಖಚಿತ ಬಾತ್ಮಿ ಬಂದಿದ್ದೇನೆಂದರೆ ಎಸ್. ಹೊಸಳ್ಳಿ ಸಿಮಾಂತರದ ಕಟಗಿ ಶಹಾಪೂರ – ಎಸ್.ಹೊಸಳ್ಳಿ ರೋಡಿನ ಪಕ್ಕದಲ್ಲಿ ಅನಧಿಕೃತವಾಗಿ ಗಾಂಜಾ ಗಿಡಗಳು ಬೇಳೆದ ಬಾತ್ಮಿ ಬಂದ ಮೇರೆಗೆ ಸ್ಥಳಕ್ಕೆ ಹೋಗಿ ದಾಳಿ ಮಾಡಲು ಒಬ್ಬ ಪತ್ರಾಂಕಿತ ಅಧಿಕಾರಿ ಚಾಸಾ-7 ಪ್ರಹಲಾದ ಜೋಶಿ ಅವರಿಗೆ ದಾಳಿ ಸಮಯಕ್ಕೆ ಹಾಜರಿರಲು ಕೇಳಿಕೊಂಡಿದ್ದು ಅವರು ಒಪ್ಪಿಕೊಂಡಿದ್ದು ನಮ್ಮ ಠಾಣಾ ಸಿಬ್ಬಂದಿ ನನ್ನನ್ನು ಮತ್ತು ಚಾಸಾ-5 ರವರು, ಬೆಳಿಗ್ಗೆ 11-15 ಗಂಟೆಗೆ ನಮ್ಮ ಇಲಾಖಾ ಜೀಪನಲ್ಲಿ ಹೊರಟು ಬಂದಳ್ಳಿ ಗ್ರಾಮಕ್ಕೆ ಹೋಗಿ ಅಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶಶಿಕಾಂತ, ಶಶಿಧರ ಮಟ್ಟಿ ಇವರಿಗೆ ದಾಳಿಯ ಮಾಹಿತಿ ತಿಳಿಸಿ ಅವರನ್ನು ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿದ್ದು ಎಲ್ಲರೂ ಕೂಡಿಕೊಂಡು ಬೆಳಿಗ್ಗೆ 11-30 ಗಂಟೆಗೆ ನಮ್ಮ ಇಲಾಖಾ ಜೀಪನಲ್ಲಿ ಹೊರಟು ಎಸ್. ಹೊಸಳ್ಳಿ ಮತ್ತು ಕಟಗಿ ಶಹಾಪೂರ ಮಾರ್ಗ ಜೀಪ ನಿಲ್ಲಿ ಎಲ್ಲರೂ ಜೀಪನಿಂದ ಇಳಿದು ರೋಡಿನ

ದಕ್ಷಿಣ ದಿಕ್ಕಿನ ಕಡೆಗೆ ನಡೆದುಕೊಂಡು ಹೋದಾಗ ಉಳ್ಳಾಗಡ್ಡಿ ಹೊಲದಲ್ಲಿ ಒಬ್ಬ ವ್ಯಕ್ತಿ ಸದೆ ತೆಗೆಯುತ್ತಿದ್ದನು, ನಾವು ಆತನ ಹತ್ತಿರ ಹೋಗುತ್ತಿದಂತೆ ಅವನು ಓಡಿ ಹೋದನು. ಅವನ ಬಗ್ಗೆ ವಿಚಾರಿಸಲಾಗಿ ಅವನ ಹೆಸರು ಶರಣಪ್ಪ ತಂದೆ ಬಸಪ್ಪ ಸಾಃ ಹೊಸಳ್ಳಿ ಎಂದು ಗೊತ್ತಾಗಿದ್ದು ನಾವು ಸದರಿ ಹೊಲವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಉಳ್ಳಾಗಡ್ಡಿ ಜೊತೆಯಲ್ಲಿ ಗಾಂಜಾದ ಗಿಡಗಳನ್ನು ಅಕ್ರಮವಾಗಿ ಬೆಳೆಸಿದ್ದು ಕಂಡು ಬಂತು. ನಾನು ಪಂಚರ ಸಮಕ್ಷಮ ಸದರಿ ಗಾಂಜಾ ಗಿಡಗಳನ್ನು ದೇವರಾಜ ತಂದೆ ಬಸಪ್ಪ ಸಾಃ ಬಂದಳ್ಳಿ ಇವರಿಂದ ತೂಕಮಾಡಿಸಿದ್ದು ಒಟ್ಟು 3 ಕೆ.ಜಿ. ಆಗಿರುತ್ತದೆ. ಅದರ ಕಿಮ್ಮತ್ತು 3,000/- ಸದರಿ ಗಾಂಜಾವನ್ನು ಒಂದು ಗೋಣಿ ಚೀಲದಲ್ಲಿ ಹಾಕಿ ನಾನು ಮತ್ತು ಪಂಚರು ಸಹಿ ಮಾಡಿದ ಚೀಟಿ ಅಂಟಿಸಿ ವಶಕ್ಕೆ ತೆಗೆದುಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30 ಗಂಟೆಯವರೆಗೆ ಮಾಡಿರುತ್ತೇನೆ. ಜಪ್ತಿಪಡಿಸಿಕೊಂಡ ಗಾಂಜಾದಲ್ಲಿ 200 ಗ್ರಾಮ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ಪಡೆದಿದ್ದು ಇರುತ್ತದೆ. ಸದರಿ ವಸ್ತುವನ್ನು ಪಿ.ಆರ್.ಎಸ್. ಎಂದು ಅರಗಿನ ಮುದ್ರೆ ಹಾಕಿ ವಶಪಡಿಸಿಕೊಂಡಿದ್ದು ಇರುತ್ತದೆ. ಅದರಂತೆ ನಾನು ಈ ಪ್ರಕರಣದಲ್ಲಿ ಚಾಸಾ-8 ರವರಿಗೆ ಹೇಳಿಕೆ ನೀಡಿರುತ್ತೇನೆ. ಚಾಸಾ-1 ರವರು ತಮ್ಮ ವರದಿ ನೀಡಿರುತ್ತಾರೆ. ಅದರಂತೆ ಆರೋಪಿತನ ವಿರುದ್ಧ ಕ್ರಮ ಜರುಗಿಸಲಾಯಿತು. ಸ್ಥಳದಿಂದ ಓಡಿ ಹೋದ ಆರೋಪಿತನು ಇಂದು ನ್ಯಾಯಾಲಯದ ಮುಂದೆ ಇರುತ್ತಾನೆ. ಸದರಿ ಮು.ಮಾ.1 ಮಾದರಿ ಗಾಂಜಾವನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ವಿ.ಆರ್.ಎಸ್. ವಕೀಲರಿಂದ</u>

3. ನಮ್ಮ ಠಾಣಾ ದಿನಚರಿಯಲ್ಲಿ ಖಚಿತ ಬಾತ್ಮಿ ಸ್ವೀಕರಿಸಿದ ಬಗ್ಗೆ ನಮೂದಿಸಿರುತ್ತೇವೆ. ನಾವು ದಾಳಿಯ ಕುರಿತು ಸ್ಥಳಕ್ಕೆ ಹೋಗುವ ಸಮಯದಲ್ಲಿ ಚಾಸಾ-8 ರವರು ಠಾಣಾಧಿಕಾರಿಯಾಗಿದ್ದರು. ನಮ್ಮ ಠಾಣೆಯಿಂದ ಚಾಸಾ-2 ರವರು ಇದ್ದ ಕಾಲೇಜು ಸುಮಾರು 1 ವರೆ ಕಿ.ಮೀ. ದೂರದಲ್ಲಿ ಇದೆ. ಚಾಸಾ-7 ರವರನ್ನು ಚಾಸಾ-1 ರವರು ಅವರ ಕಛೇರಿಯಿಂದ ಕರೆದುಕೊಂಡು ಬಂದಿರುತ್ತಾರೆ. ಪದವಿ ಕಾಲೇಜನಲ್ಲಿ ಚಾಸಾ-7 ರವರನ್ನು ಕರೆದುಕೊಂಡು ಬರುವಾಗ ಸುಮಾರು 5-10 ನಿಮಿಷ ಕಾಲೇಜನ ಬಳಿ ನಾನು ಜೀಪನಲ್ಲಿ ಕುಳಿತ್ತಿದ್ದೇನು. ಚಾಸಾ-7 ರವರಿಗೆ ಮುದ್ರಿತ ತಿಳುವಳಿಕೆಯನ್ನು ಮಾದರಿಯಾಗಿ ತಯಾರಿಸಿ ತಂದು ಅವರ ವೈಯಕ್ತಿಕ ವಿಚಾರಗಳನ್ನು ತುಂಬಿ ಜಾರಿ ಗೊಳಿಸಿರುತ್ತೇವೆ. ನಮ್ಮ ಠಾಣೆಯಲ್ಲಿ ನಾನು ಬರಹಗಾರನಲ್ಲ. ಚಾಸಾ-2 ಮತ್ತು 3 ರವರಿಗೆ ತಿಳುವಳಿಕೆಯನ್ನು ನೀಡಿದ ನಂತರ ಸ್ವೀಕೃತಿ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಸ್ಥಳಕ್ಕೆ ಹೋಗುವ ಸಮಯದಲ್ಲಿ ಗ್ರಾಮಲೇಖಿಗರನ್ನು ಕರೆದುಕೊಂಡು ಹೋಗಿರಲಿಲ್ಲ.

4. ಆರೋಪಿ ನಮ್ಮನ್ನು ಸುಮಾರು 4-5 ಹೊಲಗಳ ದೂರದಲ್ಲಿ ವಾಹನದೊಂದಿಗೆ ನೋಡಿ ಓಡಿ ಹೋಗಿರುತ್ತಾನೆ. ಸ್ಥಳದಿಂದ ಓಡಿ ಹೋದ ವ್ಯಕ್ತಿ ಆರೋಪಿತನೇ ಇರುತ್ತಾನೆ ಎಂದು ಅಕ್ಕಪಕ್ಕದ ಹೊಲದವರು ಖಚಿತಪಡಿಸಿರುತ್ತಾರೆ. ಆ ಸಮಯದಲ್ಲಿ ಅಕ್ಕಪಕ್ಕದವರ ಹೊಲದವರ ಹೇಳಿಕೆಗಳನ್ನು ಚಾಸಾ-1 ರವರು ಪಡೆದಿರಲಿಲ್ಲ. ಈ ಪ್ರಕರಣದಲ್ಲಿ ಗಾಂಜಾ ಗಿಡಗಳು ಮಣ್ಣಿನಲ್ಲಿ ಬೆಳೆದಿದ್ದವು ಎಂದರೆ ಸರಿ. ಗಾಂಜಾ ಗಿಡದಲ್ಲಿನ ಬೇರು, ಖಾಂಡಾ ಮತ್ತು ಎಲೆಗಳು ಸಹ ಇದ್ದವು ಎಂದರೆ ಸರಿ. ಸದರಿ ಗಾಂಜಾ ಗಿಡಗಳ ತಳಿ ಗೊತ್ತಿಲ್ಲ.

5. ನಾವು ಯಾವುದೇ ಪ್ರಕರಣದಲ್ಲಿನ ತನಿಖೆಯಲ್ಲಿನ ವಿವರಗಳನ್ನು ಠಾಣಾ ದಿನಚರಿಯಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ದಿಃ 08.01.2018 ರಂದು ಈ ಪ್ರಕರಣದಲ್ಲಿ ದಾಳಿಯ ಬಗ್ಗೆ ಸಹ ನಮ್ಮ ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತೇವೆ ಎಂದರೆ ಸರಿ. ಚಾಸಾ-8 ರವರು ಸದರಿ ದಾಳಿಯ ಸಮಯದಲ್ಲಿನ ನನ್ನ ಹೇಳಿಕೆಯನ್ನು ಠಾಣಾ ದಿನಚರಿಯಲ್ಲಿ ನಮೂದಿಸಿ ಅದರ ಪ್ರತಿಯನ್ನು ನನಗೆ ನೀಡಿಲ್ಲ. ನಿ.ಪಿ.1ರ ಚೆಕ್ಕು ಬಂದಿಯನ್ನು ಅಕ್ಕಪಕ್ಕದ ಹೊಲದವರು ತಿಳಿಸಿರುತ್ತಾರೆ. ಪ್ರಸ್ತುತ ಅದರ ಚೆಕ್ಕು ಬಂದಿ ಹೇಳಲು ಬರುವುದಿಲ್ಲ.

6. ದಿಃ 08.01.2018 ರಂದು ಬೆಳಿಗ್ಗೆ 11-00 ಗಂಟೆಗೆ ನಾನು ಮತ್ತು ಚಾಸಾ-5 ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರಿಗೆ ಖಚಿತ ಬಾತ್ಮಿ ಬಂದಿದ್ದೇನೆಂದರೆ ಎಸ್. ಹೊಸಳ್ಳಿ ಸಿಮಾಂತರದ ಕಟಗಿ ಶಹಾಪೂರ – ಎಸ್.ಹೊಸಳ್ಳಿ ರೋಡಿನ ಪಕ್ಕದಲ್ಲಿ ಅನಧಿಕೃತವಾಗಿ ಗಾಂಜಾ ಗಿಡಗಳು ಬೇಳೆದ ಬಾತ್ಮಿ ಬಂದ ಮೇರೆಗೆ ಸ್ಥಳಕ್ಕೆ ಹೋಗಿ ದಾಳಿ ಮಾಡಲು ಒಬ್ಬ ಪತ್ರಾಂಕಿತ ಅಧಿಕಾರಿ ಚಾಸಾ-7 ಪ್ರಹಲಾದ ಜೋಶಿ ಅವರಿಗೆ ದಾಳಿ ಸಮಯಕ್ಕೆ ಹಾಜರಿರಲು ಕೇಳಿಕೊಂಡಿದ್ದು ಅವರು ಒಪ್ಪಿಕೊಂಡಿದ್ದು ನಮ್ಮ ಠಾಣಾ ಸಿಬ್ಬಂದಿ ನನ್ನನ್ನು ಮತ್ತು ಚಾಸಾ-5 ರವರು, ಬೆಳಿಗ್ಗೆ 11-15 ಗಂಟೆಗೆ ನಮ್ಮ ಇಲಾಖಾ ಜೀಪನಲ್ಲಿ ಹೊರಟು ಬಂದಳ್ಳಿ ಗ್ರಾಮಕ್ಕೆ ಹೋಗಿ ಅಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶಶಿಕಾಂತ, ಶಶಿಧರ ಮಟ್ಟಿ ಇವರಿಗೆ ದಾಳಿಯ ಮಾಹಿತಿ ತಿಳಿಸಿ ಅವರನ್ನು ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿದ್ದು ಎಲ್ಲರೂ ಕೂಡಿಕೊಂಡು ಬೆಳಿಗ್ಗೆ 11-30 ಗಂಟೆಗೆ ನಮ್ಮ ಇಲಾಖಾ ಜೀಪನಲ್ಲಿ ಹೊರಟು ಎಸ್. ಹೊಸಳ್ಳಿ ಮತ್ತು ಕಟಗಿ ಶಹಾಪೂರ ಮಾರ್ಗ ಜೀಪ ನಿಲ್ಲಿ ಎಲ್ಲರೂ ಜೀಪನಿಂದ ಇಳಿದು ರೋಡಿನ ದಕ್ಷಿಣ ದಿಕ್ಕಿನ ಕಡೆಗೆ ನಡೆದುಕೊಂಡು ಹೋದಾಗ ಉಳ್ಳಾಗಡ್ಡಿ ಹೊಲದಲ್ಲಿ ಒಬ್ಬ ವ್ಯಕ್ತಿ ಸದೆ ತೆಗೆಯುತ್ತಿದ್ದನು, ನಾವು ಆತನ ಹತ್ತಿರ ಹೋಗುತ್ತಿದಂತೆ ಅವನು ಓಡಿ ಹೋದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವನ ಬಗ್ಗೆ ವಿಚಾರಿಸಲಾಗಿ ಅವನ ಹೆಸರು ಶರಣಪ್ಪ ತಂದೆ ಬಸಪ್ಪ ಸಾಃ ಹೊಸಳ್ಳಿ ಎಂದು ಗೊತ್ತಾಗಿದ್ದು ನಾವು ಸದರಿ ಹೊಲವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಉಳ್ಳಾಗಡ್ಡಿ ಜೊತೆಯಲ್ಲಿ ಗಾಂಜಾದ ಗಿಡಗಳನ್ನು ಅಕ್ರಮವಾಗಿ ಬೆಳೆಸಿದ್ದು ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚರ ಸಮಕ್ಷಮ ಸದರಿ

ಗಾಂಜಾ ಗಿಡಗಳನ್ನು ದೇವರಾಜ ತಂದೆ ಬಸಪ್ಪ ಸಾಃ ಬಂದಳ್ಳಿ ಇವರಿಂದ ತೂಕಮಾಡಿಸಿದ್ದು ಒಟ್ಟು 3 ಕೆ.ಜಿ. ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರ ಕಿಮ್ಮತ್ತು 3,000/- ಸದರಿ ಗಾಂಜಾವನ್ನು ಒಂದು ಗೋಣಿ ಚೀಲದಲ್ಲಿ ಹಾಕಿ ನಾನು ಮತ್ತು ಪಂಚರು ಸಹಿ ಮಾಡಿದ ಚೀಟಿ ಅಂಟಿಸಿ ವಶಕ್ಕೆ ತೆಗೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30 ಗಂಟೆಯವರೆಗೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಪ್ತಿಪಡಿಸಿಕೊಂಡ ಗಾಂಜಾದಲ್ಲಿ 200 ಗ್ರಾಮ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ಪಡೆದಿದ್ದು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಸ್ತುವನ್ನು ಪಿ.ಆರ್.ಎಸ್. ಎಂದು ಅರಗಿನ ಮುದ್ರೆ ಹಾಕಿ ವಶಪಡಿಸಿಕೊಂಡಿದ್ದು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ನಾನು ಈ ಪ್ರಕರಣದಲ್ಲಿ ಚಾಸಾ-8 ರವರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ತಮ್ಮ ವರದಿ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಆರೋಪಿತನ ವಿರುದ್ಧ ಕ್ರಮ ಜರುಗಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಮೇಲಾಧಿಕಾರಿ ಇದ್ದು ಅವರಿಗೆ ಸಹಾಯ ಮಾಡಲು ಆರೋಪಿತನ ವಿರುದ್ಧ ನಾನು ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.